# ಬರ್ತ್‌ಡೇ ನೆಪದಲ್ಲಿ ಪಾಠ



**ಹುಟ್ಟುಹಬ್ಬದ ಆಚರಣೆ ಮನರಂಜನೆಯ ಜೊತೆಗೆ ಮನೋವಿಕಾಸಕ್ಕೆ ಯಾಕೆ ಕಾರಣವಾಗಬಾರದು? ಆ ಸಾಧ್ಯತೆ ನಿಮ್ಮ ಕೈಯಲ್ಲೇ ಇದೆ.**

■ ಸ್ವಯಂಪ್ರಭಾ

ಸನ್ನಿಧಿ ಪುಟ್ಟಿಯ ಐದನೇ ವರ್ಷದ ಬರ್ತ್‌ಡೇಯನ್ನು ಬಹಳ ಸಂಭ್ರಮದಿಂದ ಆಚರಿಸಬೇಕು ಎನ್ನುವುದು ಅವಳಮ್ಮನ ಆಸೆಯಾಗಿತ್ತು. ಸಾಮಾನ್ಯವಾಗಿ ಬರ್ತ್‌ಡೇ ಎಂದರೆ ಹೇಗಿರುತ್ತದೆ? ಒಂದು ಚಂದದ ಬಾರ್ಬಿ ಕೇಕ್, ಅದರ ಹೊದಿಕೆಯನ್ನು ತೆರೆಯುತ್ತಿರುವಂತೆ ಅಲೆ ಅಲೆಯಾಗಿ ತೇಲಿ ಬಂದಂತೆ ಕಾಣುವ ಸನ್ನಿಧಿಯ ಭಾವಚಿತ್ರ, ಸುತ್ತಲೂ ಸಾಲುದೀಪಗಳು, ಅವುಗಳ ನಡುವೆ 'ಐದು' ಎಂಬ ಸಂಖ್ಯೆಯನ್ನು ಚಿತ್ತಾರವಾಗಿ ಬರೆದ ಒಂದು ಕ್ಯಾಂಡಲ್. ಸನ್ನಿಧಿಯು ಹಾಲ್ ಪ್ರವೇಶಿಸುತ್ತಿದ್ದಂತೆಯೇ ಟಪ್ ಎನ್ನುವ ಪಾರ್ಟಿ ಪಪ್ಪರ್‌ನ ಸದ್ದು, ಹೆಜ್ಜೆ ಹಾಕಿ ಕುಣಿಯಬೇಕು ಎಂಬಷ್ಟು ಚಂದದ ಹಾಡು. ಅದಾದಮೇಲೆ ಇನ್ನೇನು, ಕೇಕ್ ಕಟ್ ಮಾಡ್ತಾ, 'ಹ್ಯಾಪಿ ಬರ್ತ್ ಡೇ ಟೂ ಯು' ಎಂಬ ಹಾಡು ಹೇಳುವುದು, ಎಲ್ಲರೂ ಸೇರಿ ಆರತಿ ಮಾಡುವುದು, ವಿಶ್ ಮಾಡುವುದು ಹಾಗೂ ಗೇಮ್ಸ್‌ಗಳನ್ನು ಆಡುವುದು, ಪ್ರೈಸ್‌ಗಳನ್ನು ಗೆಲ್ಲುವುದು ಮತ್ತು ಭರ್ಜರಿಯಾದ ಊಟ ಮಾಡುವುದು ಅಲ್ಲವೇ.

ಇತ್ತೀಚೆಗೆ ಹುಟ್ಟುಹಬ್ಬದಂತಹ ಕಾರ್ಯಕ್ರಮಗಳಿಗೆ ಥೀಮ್‌ಗಳನ್ನು ನಿಗದಿ ಮಾಡುವುದು ವಾಡಿಕೆಯಾಗಿದೆ. ಉದಾಹರಣೆಗೆ ಕೆಂಪು ಬಿಳಿಯೋ, ನೀಲಿ ಹಳದಿಯೋ, ಗುಲಾಬಿಯದ್ದೋ ಬಣ್ಣ ಆಯ್ಕೆ ಮಾಡಿ, ಅದೇ ಬಣ್ಣದಲ್ಲಿ ಸಿಂಗಾರ ಮಾಡುವುದು, ಅದೇ ಬಣ್ಣದ ಡ್ರೆಸ್ ಧರಿಸುವುದು ಒಂದು ಫ್ಯಾಷನ್. ಸನ್ನಿಧಿಯ ಅಮ್ಮ ಇದೇ ಟ್ರೆಂಡ್ ಅನ್ನು ಸ್ವಲ್ಪವೇ ಬದಲಾಯಿಸಿ ವಿಭಿನ್ನವಾಗಿ ಕಾರ್ಯಕ್ರಮ ರೂಪಿಸಿದ್ದರು. ಬರ್ತ್ ಡೇಗೆ ಒಂದು ಹೊಸ ಥೀಮ್ ಮಾಡಿದ್ದರು. ಅದು ಐದನೇ ವರ್ಷದ ಬರ್ತ್‌ಡೇ ಆದ್ದರಿಂದ, ಇತಿಹಾಸದಲ್ಲಿ ಬರುವ ಐವರು ಮಹಾನ್ ಪುರುಷರ ಕುರಿತಾಗಿಯೇ ಇಡೀ ಬರ್ತ್‌ಡೇಯನ್ನು ಆಯೋಜಿಸಲು ನಿರ್ಧರಿಸಲಾಗಿತ್ತು.

ಮಹಾತ್ಮ ಗಾಂಧೀಜಿ, ಶಿವಾಜಿ ಮಹಾರಾಜ, ಬಿ.ಆರ್. ಅಂಬೇಡ್ಕರ್, ರಾಜಾರಾಮ್ ಮೋಹನ್ ರಾಯ್, ಕಮಲಾದೇವಿ ಚಟ್ಟೋಪಾಧ್ಯಾಯರೆಂಬ ಐವರು ಮಹನೀಯರ ಜೀವನದ ಕತೆಯ ಸುತ್ತವೇ ಬರ್ತ್‌ಡೇಯನ್ನು ಕೇಂದ್ರೀಕರಿಸಲಾಗಿತ್ತು. ಅಂದರೆ ಈ ಐವರ ದೊಡ್ಡ ಭಾವಚಿತ್ರವನ್ನು ಹಾಲ್‌ನಲ್ಲಿ ಹಾಕಲಾಗಿತ್ತು. ಪ್ರತಿಯೊಂದು ಭಾವಚಿತ್ರದ ಕೆಳಗೆ ಅವರ ಜೀವನದ ಸಾಧನೆಯನ್ನು ವಿವರಿಸುವ ಐದೈದು ಸಾಲುಗಳನ್ನು ಬರೆಯಲಾಗಿತ್ತು.

ಬರ್ತ್‌ಡೇ ಕಾರ್ಯಕ್ರಮ ನಿರೂಪಕಿಯು, ಈ ಐವರ ಕುರಿತೇ ಪ್ರಶ್ನೆಗಳನ್ನು ಕೇಳುತ್ತ, ಗೇಮ್ಸ್ ಆಡಿಸತೊಡಗಿದಳು. ಉದಾಹರಣೆಗೆ, 'ಅಂಬೇಡ್ಕರ್' ಎಂಬ ಹೆಸರಿನ ಹಿನ್ನೆಲೆಯಲ್ಲಿ ಅವರ ಬದುಕಿನ ಕುರಿತು ಒಂದೆರಡು ಪ್ರಶ್ನೆ, ಸಂವಿಧಾನದ ಆಶಯವನ್ನು ತಿಳಿಸುವ ಒಂದು ಕತೆ ಹೇಳುವ ಸ್ಪರ್ಧೆಯನ್ನು ಏರ್ಪಡಿಸಿದ್ದಳು. ಮಹಾತ್ಮ ಗಾಂಧೀಜಿ ಕುರಿತ ಒಂದು ಕತೆಯನ್ನು ಹೇಳುವುದು, ಡಮ್ ಶರಾಡ್ಸ್‌ನಲ್ಲಿಯೂ ಗಾಂಧೀಜಿಯ ಬದುಕಿನ ಘಟನೆಗಳನ್ನೇ ಆಧರಿಸಿದ ಚೀಟಿಗಳನ್ನು ಹಾಕುವುದು, ಶಿವಾಜಿ ಕೋಟೆ ಏರಿ ಹೋಗುವುದು, ಮುಂತಾದ ಸ್ಪರ್ಧೆಗಳನ್ನು ಆಯೋಜಿಸಿದ್ದಳು. ಎಲ್ಲರಿಗೂ ಕೇಸರಿ, ಬಿಳಿ, ಹಸಿರು ಬಣ್ಣದ ದಿರಿಸು ಧರಿಸುವಂತೆ ಹೇಳಲಾಗಿತ್ತು.

ಮಕ್ಕಳು ದೇಶಭಕ್ತಿಯ ಹಾಡುಗಳನ್ನು ಹಾಡಿದರು. ಧ್ವಜದ ಮೇಲಿನ ಮೂರು ಬಣ್ಣಗಳ ಮಹತ್ವವೇನು, ಅಶೋಕ ಚಕ್ರದ ಹಿಂದಿರುವ ಕತೆಯೇನು ಎಂಬುದನ್ನೆಲ್ಲ ನಿರೂಪಕಿಯು ಪ್ರಶ್ನೆಗಳ ಮೂಲಕ, ವಿವರಣೆಗಳ ಮೂಲಕ ಅತಿಥಿಗಳಿಗೆ ತಿಳಿಸಿಕೊಟ್ಟಳು.

ಹಿನ್ನೆಲೆ ಸಂಗೀತವಾಗಿಯೂ ಅಂತಹ ಹಾಡುಗಳನ್ನೇ ಆಯ್ಕೆ ಮಾಡಿ ಹಾಕಿದ್ದಳು. ಪ್ರತಿಯೊಂದು ದೇಶಭಕ್ತಿ ಗೀತೆಯ ಹಿಂದಿರುವ ಕತೆಯನ್ನು ವಿವರಿಸಲಾಯಿತು. 'ಸಾರೇ ಜಹಾಂಸೆ ಅಚ್ಛಾ', 'ಯೇ ಮೇರೆ ವತನ್ ಕೇ ಲೋಗೋ', 'ವಿಜಯಿ ವಿಶ್ವ ತಿರಂಗಾ' – ಹೀಗೆ ಹಾಡಿನ ಮೇಲೊಂದು ಹಾಡು ಹೇಳುತ್ತ, ಅಂತಹುದೇ ಹಾಡುಗಳಿಗೆ ನೃತ್ಯ ಮಾಡುತ್ತ ಎಲ್ಲರೂ ಬರ್ತ್‌ಡೇಯನ್ನು ಸಂಭ್ರಮದಿಂದ ಆಚರಿಸಿದರು.

ಬರ್ತ್‌ಡೇ ನೆಪದಲ್ಲಿ ಅಲ್ಲಿ ಸೇರಿದ್ದವರೆಲ್ಲ ಹೊಸ ವಿಚಾರಗಳನ್ನು ಕಲಿತರು. ನಮ್ಮ ದೇಶದ ಬಗ್ಗೆಯೇ ಅರಿತುಕೊಂಡರು. ಹೊಸ ಹಾಡುಗಳನ್ನು ಕಲಿತರು. ಆ ಹಾಡುಗಳು ಹೇಗೆ ರೂಪುಗೊಂಡವು ಎಂಬುದನ್ನು ತಿಳಿಯುವಂತಾಯಿತು. ತಾವು ಧರಿಸಿದ ಬಣ್ಣಗಳ ಹಿಂದೆ ಅಡಗಿರುವ ತತ್ವಗಳೇನು ಎಂಬುದನ್ನು ಅರಿತರು. ಮಕ್ಕಳಿಗೂ ಒಂದಿಷ್ಟು ದೇಶಭಕ್ತರ ಕುರಿತು ಅರಿವು ಮೂಡಿದಂತಾಯಿತು.

ಸಂದರ್ಭವೊಂದನ್ನು ನಾವು ಹೇಗೆ ಸಂಭ್ರಮಿಸುತ್ತೇವೆ ಎನ್ನುವುದು ಮಕ್ಕಳಿಗೆ ಮಾದರಿಯಾಗಿರುತ್ತದೆ. ಮಕ್ಕಳಿಗೆ ಬೋಧನೆಯನ್ನೋ, ಉಪದೇಶವನ್ನೋ ನೇರವಾಗಿ ಮಾಡುವುದಕ್ಕೆ ಬದಲಾಗಿ, ಇಂತಹ ಸಂದರ್ಭಗಳನ್ನು ಬಳಸಿಕೊಂಡರೆ ಅವರಿಗೆ ಮನರಂಜನೆಯೊಂದಿಗೆ ಪಾಠವನ್ನೂ ಮಾಡಿದಂತಾಯಿತು.

ದೇಶಭಕ್ತಿಯ ಪರಿಕಲ್ಪನೆಯಷ್ಟೇ ಅಲ್ಲ, ಬಾರ್ಬಿ ಎಂಬ ಬೊಂಬೆಯು ಹೇಗೆ ರೂಪು ಪಡೆಯಿತು, ಕಂಪ್ಯೂಟರಿನ ಕತೆಯೇನು, ಕೊರೊನಾ ವೈರಸ್ ಉಪಟಳ – ಹೀಗೆ ಗಂಭೀರವಾದ, ಲಘುವಾದ ವಿಚಾರಗಳನ್ನು ಆಯ್ದುಕೊಂಡು, ಬರ್ತ್ ಡೇಗೆ ಥೀಮ್ (ಪರಿಕಲ್ಪನೆ) ಸಿದ್ಧಪಡಿಸಬಹುದು. ಈಗ ಹೇಳಿ, ನಿಮ್ಮ ಬರ್ತ್‌ಡೇಗೆ ಯಾವ ಥೀಮ್ ಆದೀತು?

ಪ್ರತಿಕ್ರಿಯಿಸಿ: feedback@sudha.co.in